ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರಃ 1066/2023

ಪ್ರಾ.ಸಾಃ1

ದಿನಾಂಕಃ 02-03-2024

| | | |
|---|---|---|
| ವಾಗ್ಮೂಲದವರ ಹೆಸರು | : | ವಿಜಯ |
| ತಂದೆಯ ಹೆಸರು | : | ದಿ. ತಿಮ್ಮ ತಿಂಗಳಾಯ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಹೆಚ್ ಸಿ ಕುಂದಾಪುರ ಪೊಲೀಸ್ ಠಾಣೆ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆಃ ನ್ಯಾಯಾಲಯದ ವತಿಯಿಂದಃ**

ನಾನು ಕುಂದಾಪುರ ಪೊಲೀಸ್ ಠಾಣೆ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದಿಂದ ಒಂದು ಉದ್ಘೋಷಿತ ವಾರಂಟನ್ನು ಆರೋಪಿ ದಿವಾಕರ್ ಶೆಟ್ಟಿ ಎಂಬುವರ ವಿರುದ್ಧ ಹೊರಡಿಸಿದ್ದು, ಅದನ್ನು ನಾನು ಪಡೆದುಕೊಂಡು ದಿಃ **15-11-2022** ರಂದು ಪಡಿಲ್ ಬಸ್ ನಿಲ್ದಾಣದಲ್ಲಿಗೆ ಭೇಟಿ ನೀಡಿದ್ದು, ಅಲ್ಲಿನ ಸಾರ್ವಜನಿಕರನ್ನು ವಿಚಾರಿಸಲಾಗಿದ್ದು, ಆರೋಪಿಯ ಬಗ್ಗೆ ಯಾವುದೇ ವಿಚಾರಗಳು ಗೊತ್ತಾಗದೆ ತಲೆಮರೆಸಿಕೊಂಡಿರುವುದಾಗಿ ತಿಳಿದು ಬಂದಿರುತ್ತದೆ. ಆ ಕಾರಣದಿಂದ ನಾನು ದಿಃ **23-12-2022** ರ ಒಳಗೆ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಹೇಳಿ ಟಾಂ ಟಾಂ ಮೂಲಕ ಪ್ರಚಾರ ಪಡಿಸಿದ್ದು, ನಂತರ ಉದ್ಘೋಷಿತ ವಾರಂಟಿನ ಒಂದು ಪ್ರತಿಯನ್ನು ಅಡ್ಯಾರು ಗ್ರಾಮ ಪಂಚಾಯತ್ ಕಚೇರಿಯ ಗೋಡೆಗೆ ಮತ್ತು ಪಡಿಲ್ ಬಸ್ ನಿಲ್ದಾಣದ ಗೋಡೆಗೆ ಇನ್ನೊಂದು ಪ್ರತಿಯನ್ನು ಅಂಟಿಸಿ ಜಾರಿ ಮಾಡಿರುತ್ತೇನೆ, ನಂತರ ಸ್ಥಳದಲ್ಲಿ ಉದ್ಘೋಷಿತ ಮಹಜರನ್ನು ಬೆಳಿಗ್ಗೆ **10-30** ರಿಂದ

11.00 ಗಂಟೆಯವರೆಗೆ ಪಂಚರ ಸಮಕ್ಷಮ ತಯಾರಿಸಿ ಶಂಕರ್ ನಾಯಕ್ ಮತ್ತು ಪಾಂಡುರಂಗರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಉದ್ಘೋಷಿತ ಪಂಚನಾಮೆ ಹಾಗೂ ವಾರಂಟನ ಪ್ರತಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಈ ದಿನ ಉದ್ಘೋಷಿತ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.1(ಎ), ತಹಶೀಲ್ದಾರವರು ನೀಡಿದ ವರದಿಯನ್ನು ನಿಪಿ.2 ಎಂದು ಗುರುತಿಸಲಾಯಿತು.

ಆರೋಪಿ ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ